**Code No. 10 X(D)**

**ವಾಣಿಜ್ಯ ಪರೀಕ್ಷೆಗಳು**

# ಕನ್ನಡ ಬೆರಳಚ್ಚು – ಪ್ರಥಮ ದರ್ಜೆ – ಪ್ರಥಮ ಪತ್ರಿಕೆ

ಜೂನ್, 2016

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಈ ಐಹಿಕ ಪ್ರಪಂಚದಲ್ಲಿ ಕಂಡುಬಂದ ಶ್ರೀ ಕೃಷ್ಣನ ಅಸ್ತಿತ್ವ ಏನನ್ನು ಸೂಚಿಸುತ್ತದೆ. ಶ್ರೀ ಕೃಷ್ಣನ ಅಗಾಧವಾದ ಸೇವಾಶಕಿ, ಕ್ರಿಯಾಶಕ್ತಿಯ ಒಂದು ಸಾಕಾರಾವೇ ಆಗಿದೆ. ಮಾನವಕುಲಕ್ಕೆ, ಹಾನಿಕಾರಕವಾಗಿ ಪರಿಣಮಿಸಬಹುದಾದ ಯಾವುದೇ ಶಕ್ತಿಯನ್ನ ಅಡಗಿಸಿ, ಒಳ್ಳೆಯದು ಎನಿಸುವ ಮತ್ತು ಇತರರಿಗೆ ಪ್ರಯೋಜನಕಾರಿ ಆಗಿರುವ ಎಲ್ಲ ಸಂಗತಿಗಳ ಬೆಳವಣಿಗೆಗೆ ಅನುವು ಮಾಡಿಕೊಡುವ ಸಂಕಲ್ಪಶಕ್ತಿ, ಅಧಿಕಾರವಾಣಿ ಅವನಲ್ಲಿತ್ತು. ಉದಾತ್ತ ಆಶ್ರಯಗಳನ್ನು ಹೊಂದಿದ್ದೂ ದುರ್ಬಲರು ಆಗಿರುವವರಿಗೆ ಮತ್ತು ತಮ್ಮನ್ನು ತಾವು ಸಲಹಿಕೊಳ್ಳಲು ಅಥವಾ ತಂತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಅಸಮರ್ಥರು ಆಗಿರುವವರಿಗೆ ಸಮಾಜವು ಒತ್ತಾಯವಾಗಿ ನಿಲ್ಲಬೇಕು ಹಾಗೂ ಅವರ ನಿಗಾ ನೋಡಬೇಕು ಎಂಬುದು ಪಾರ್ಥಸಾರಥಿ ಕೃಷ್ಣನ ಸಿದ್ಧಾಂತ ಆಗಿತ್ತು.

ಕೃಷ್ಣನು ವೈರಾಗ್ಯದ ಸಂದೇಶವನ್ನು ಎಂದಿಗೂ ಬೋಧಿಸಲಿಲ್ಲ, ಒಟ್ಟಾಗಿ ಸಾಮುದಾಯಕವಾಗಿ ನಡೆಯಿರಿ. ಎಲ್ಲರ ಶ್ರೇಯೋಭಿವೃದ್ಧಿಗೆ ಶ್ರಮಿಸಿರಿ. ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಸ್ತರಗಳಲ್ಲಿ ಸೂಕ್ತ ಹೊಂದಾಣಿಕೆ ಮಾಡಿಕೊಳ್ಳುವುದರ ಜತೆಜತೆಗೇ, ಈ ಹಂತಗಳಲ್ಲಿ ನಿಮ್ಮನ್ನು ನೀವು ಬೆಳಸಿಕೊಳ್ಳಿ, ವರ್ತಮಾನದಲ್ಲಿ ಜೀವಿಸಿ ಎಂಬುದು ಕೃಷ್ಣನ ಸಂದೇಶಗಳಲ್ಲಿ ಒಂದಾಗಿತ್ತು. ಈ ಐಹಿಕ ಪ್ರಪಂಚದಲ್ಲಿ ಅಸ್ತಿತ್ವ ಕಂಡುಕೊಂಡಿರುವ ನಿಮ್ಮ ಶರೀರಕ್ಕೆ ಆಹಾರ, ನೀರು ಮತ್ತು ಇನ್ನೂ ಅನೇಕ ಮೂಲಭೂತ ವಸ್ತು ವಿಷಯಗಳ ಅಗತ್ಯವಿರುತ್ತದೆ. ಶರೀರವು ಸಮರ್ಪಕವಾಗಿ ಕಾರ್ಯನಿರ್ವಹಿಸಲು

ಜೀವಶಕ್ತಿ ಅಥವಾ ಚೈತನ್ಯದ ಅವಶ್ಯಕತೆ ಇರುತ್ತದೆ. ಜೀವಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಸೂಕ್ತ ಪ್ರಮಾಣದಲ್ಲಿ ನೀವು ಆಹಾರವನ್ನು ಸೇವಿಸಬೇಕಾಗುತ್ತದೆ. ಒಂದೊಮ್ಮೆ ನಿಮ್ಮದೇ ಪ್ರಯತ್ನಗಳ ಮೂಲಕ ನೀವು ದೇಹಕ್ಕೆ ಆಹಾರ ಒದಗಿಸುವುದು ಸಾಧ್ಯವಾಗದಿದ್ದಲ್ಲಿ, ಆಗ ಸಮಾಜವು ನಿಮಗಾಗಿ ಅಂಥದೊಂದು ಕೈಂಕರ್ಯಕ್ಕೆ ಮುಂದಾಗಬೇಕು. ಇದು ನೆರವೇರಲು ಧರ್ಮರಾಜ್ಯ ಅಂದರೆ ನ್ಯಾಯಪರತೆಯ ನಿಯಮವು ನೆಲೆಗೊಳ್ಳಬೇಕು. ಇದನ್ನು ನೆಲೆಗೊಳಿಸಲೆಂದೇ ಪಾರ್ಥಸಾರಥಿ ಶ್ರೀ ಕೃಷ್ಣ ತನ್ನಿಡೀ ಶಕ್ತಿ ಮತ್ತು ಸಮಯವನ್ನು ಸಮರ್ಪಿಸಿದ. ನಿಮ್ಮೆಲ್ಲಾ ಐಹಿಕ ಕರ್ತವ್ಯಗಳನ್ನು ಅತೀತ ಬದ್ಧತೆ ಮತ್ತು ಪ್ರಾಮಾಣಿಕತೆಯಿಂದ ನಿರ್ವಹಿಸಿ, ಆದರೆ ಮನಸ್ಸನ್ನು ಮಾತ್ರ ಭಗವಂತನ ಸ್ಮರಣೆಯಲ್ಲೇ ನಿರಂತರವಾಗಿ ತೊಡಗಿಸಿ ಎಂಬ ಸಂದೇಶವನ್ನಿತಿದ್ದಾನೆ ಶ್ರೀ ಕೃಷ್ಣ.

ಜೀವನದಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಬೇಕೆಂದಿದ್ದರೆ, ಭಗವಂತನನ್ನು ಕೇವಲ ಕೆಲಕಾಲ ಸ್ಮರಿಸಿದಂತೆ ಮಾಡಿ ಸುಮ್ಮನಿದ್ದು ಬಿಡುವುದಲ್ಲ, ಆಗ ಅವಾಸ್ತವಿಕತೆಯನ್ನು, ಅಧಿಕ ಹೊರೆಯನ್ನು ಜತೆಯಲ್ಲಿಟ್ಟುಕೊಂಡು ಸಾಂಗತ್ಯಕ್ಕಾಗಿ ಯಾರ ಕಡೆಗೆ ಮುಖ ಮಾಡುವಿರಿ. ನಿಮ್ಮ ಅಸ್ತಿತ್ವವೇ ನಿರ್ಲಕ್ಷಿಸಲ್ಪಟ್ಟಾಗ ಪರಮಪುರುಷ ಭಗವಂತನೊಂದಿಗೆ ಕೇವಲ ಕ್ಷಣಕಾಲವಷ್ಟೇ ಇರುವುದರಿಂದ ಸಿಗುವ ಪ್ರಯೋಜನವಾದರೂ ಏನು ? ನಮ್ಮ ಶರೀರ, ಮನಸ್ಸು ಮತ್ತು ಜೀವಶಕ್ತಿ ಎಲ್ಲವೂ ಭಗವಂತನ ಸಾಂಗತ್ಯದಿಂದ ಪುನೀತವಾಗಿದೆ, ಅವನು ಯಾವಾಗಲೂ ಅವುಗಳ ಜತೆಯಲ್ಲಿರುತ್ತಾನೆ.